3. ಬೆಳವಾಡಿ ಕ್ರಾಸ್‌ದಿಂದ ಸಂಗೊಳ್ಳಿವರೆಗಿನ ರಸ್ತೆಯು ಜಿಲ್ಲಾ ಮುಖ್ಯ ರಸ್ತೆ ಆಗಿದ್ದು ಇದರ ಉದ್ದಳತೆ 10.30 ಕಿಮೀ ಇದ್ದು, ಮರು ಡಾಂಬರೀಕರಣವನ್ನು ಮಾಡಿರುವುದಿಲ್ಲ.

ಇ) ಹೌದು.

ಈ) ಮೇಲೆ ನಮೂದಿಸಿದ ರಸ್ತೆಗಳ ಒಟ್ಟು ಉದ್ದ 44.70 ಕಿಮೀ ಇದ್ದು, ಅದರಲ್ಲಿ 26.00 ಕಿ.ಮೀ. ಉದ್ದಳತೆಗೆ ತಗ್ಗುಗುಂಡಿ ತುಂಬಿ ಸುಸ್ಥಿತಿಯಲ್ಲಿ ಇಡಲಾಗಿದೆ. ಬಾಕಿ ಉಳಿದ ಭಾಗದಲ್ಲಿ ತಗ್ಗುಗುಂಡಿ ತುಂಬುವ ಕೆಲಸ ಪ್ರಗತಿಯಲ್ಲಿದೆ. ಸವದತ್ತಿ ಬೆಳವಡಿ ರಸ್ತೆಯ 2.20 ಕಿಮೀಗಳಿಗೆ ಹಾಗೂ ಬೆಳವಡಿಯಿಂದ ಸಂಗೊಳ್ಳಿವರೆಗಿನ ರಸ್ತೆಯು 1.60 ಕಿಮೀಗಳಿಗೆ ರಸ್ತೆಯನ್ನು ಸಮಪಾತಳಿ ಮಾಡಿ ಮರು ಡಾಂಬರೀಕರಣ ಮಾಡಲು 2001-2002 ರಲ್ಲಿ ಒಟ್ಟು 10.50 ಲಕ್ಷ ರೂ.ಗಳ ಹೆಚ್ಚುವರಿ ಅನುದಾನವನ್ನು ಪಡೆದಿದ್ದು, ಈಗಾಗಲೇ ನಾಲ್ಕು ಬಾರಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕಟಣೆಗೆ ಗುತ್ತಿಗೆದಾರರಿಂದ ಪ್ರತಿಕ್ರಿಯೆ ಬಂದಿರುವುದಿಲ್ಲ. ಆದ್ದರಿಂದ ಈ ಕೆಲಸಗಳನ್ನು ಎಂಟ್ರಸ್ಟ್‌ಮೆಂಟ್ ಆಧಾರದ ಮೇಲೆ ಕೈಗೆತ್ತಿಕೊಳ್ಳುವ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಉ) 1. ಬೈಲಹೊಂಗಲ ಮಾಟೋಳಿ ವಾಯಾ ಹೊಸೂರ ರಸ್ತೆಯ ಒಟ್ಟು ಉದ್ದ 8.00 ಕಿಮೀ ಇದ್ದು, 5.50 ಮೀ ಅಗಲದ ಡಾಂಬರ ರಸ್ತೆಯಾಗಿದೆ. ಈ ರಸ್ತೆಯ ಮೇಲಿನ ತಗ್ಗು ಗುಂಡಿಗಳನ್ನು ತುಂಬಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿ ಕೊಡಲಾಗಿದ್ದು, ವಾರ್ಷಿಕ ಅನುದಾನದ ಲಭ್ಯತೆಯ ಮೇರೆಗೆ ಮರು ಡಾಂಬರೀಕರಣವನ್ನು ಮಾಡಲಾಗುವುದು.

2. ಬೈಲಹೊಂಗಲ ಕುಟರನಟ್ಟಿ ವಾಯಾ ಹಲ್ಕಿ ಕ್ರಾಸ್ ರಸ್ತೆ ವಿವರ ಕೆಳಕಂಡಂತಿದೆ:

(ಎ) ಹಲ್ಕಿ ಬೈಲಹೊಂಗಲ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು 15.10 ಕಿಮೀ ಉದ್ದವಿದ್ದು, ಡಾಂಬರ ರಸ್ತೆಯಾಗಿದೆ. ಈ ರಸ್ತೆಯು ಸುಸ್ಥಿತಿಯಲ್ಲಿದ್ದು, ಮರು ಡಾಂಬರೀಕರಣ ಅವಶ್ಯವಿರುವುದಿಲ್ಲ.

(ಬಿ) ಹಲ್ಕಿ-ಕುಟರನಟ್ಟಿ ರಸ್ತೆಯು ಹೊಲಿಕಟ್ಟೆ ಮಕ್ಕಳಗೇರಿ ತಡಸಾಲೂರ ಜಿಲ್ಲಾ ಮುಖ್ಯ ರಸ್ತೆಯ ಭಾಗವಿದ್ದು, ಸವದತ್ತಿ ತಾಲ್ಲೂಕಿನಲ್ಲಿ 11.00 ಕಿಮೀ ಉದ್ದವಿದ್ದು ಡಾಂಬರ ರಸ್ತೆಯಾಗಿದೆ. ಈ ರಸ್ತೆಯು ಸುಸ್ಥಿತಿಯಲ್ಲಿದ್ದು ಸದ್ಯಕ್ಕೆ ಮರುಡಾಂಬರೀಕರಣ ಅವಶ್ಯವಿರುವುದಿಲ್ಲ.

ಬೆಳಗಾವಿ ಜಿಲ್ಲೆ ತನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ "ಫಾಸ್ಟ್ ಫುಡ್" ಸೆಂಟರ್

65 (202) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ಬೆಳಗಾವಿ ಹೆದ್ದಾರಿ ಮೇಲೆ ಹಾಗೂ ಬೆಳಗಾವಿ-ಯಲ್ಲಮ್ಮನ ಗುಡ್ಡ ಹೆದ್ದಾರಿಯ ಮೇಲೆ ಇರುವ ತನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ಪ್ರವಾಸಿಗಳ ಅನುಕೂಲತೆಗಾಗಿ "ಫಾಸ್ಟ್ ಫುಡ್" ಸೆಂಟರ್ ತೆರೆಯಲು ಕ್ರಮ ಕೈಗೊಳ್ಳಲಾಗುವುದೇ?

ಮಾನ್ಯ ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ.

ಗಣಕೀಕೃತ ಪಹಣಿ ನೀಡುವಲ್ಲಿ ಆಗುತ್ತಿರುವ ತೊಂದರೆ

66 (204) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಕಂದಾಯ ಇಲಾಖೆಯ ಎಷ್ಟು ತಾಲ್ಲೂಕು ಕೇಂದ್ರಗಳಲ್ಲಿ ಕಂಪ್ಯೂಟರ್ ಅಳವಡಿಸಲಾಗಿದೆ;

ಆ) ಪಹಣಿ ಉತಾರ ಕೊಡುವಲ್ಲಿ ಕಂಪ್ಯೂಟರೀಕರಣದಿಂದಾಗಿ ರೈತರಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಂಪ್ಯೂಟರ್‌ದಲ್ಲಿ ರೈತರು ತಮ್ಮ ಹೊಲದಲ್ಲಿ ಮಾಡಿದ ಬೆಳೆಯನ್ನು ಬೇಗನೇ ನಮೂದು ಮಾಡದೇ ಇರುವುದರಿಂದ ರೈತರು ಬೆಳೆ ವಿಮಾ ಮಾಡಿಸಲು ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕಂಪ್ಯೂಟರ್‌ದಲ್ಲಿ ರೈತರು ಬೆಳೆದ ಬೆಳೆಯನ್ನು ಬೇಗನೆ ನಮೂದು ಮಾಡಿ ಬೆಳೆ ವಿಮಾ ಯೋಜನೆ ಮಾಡಲು ರೈತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಕಂಪ್ಯೂಟರುಗಳನ್ನು ಅಳವಡಿಸಲಾಗಿದೆ ಮತ್ತು ಭೂಮಿ ಯೋಜನೆ ಕಾರ್ಯಾಚರಣೆಯಲ್ಲಿದೆ.

ಆ) ಕೆಲವು ರೈತರು ತಮ್ಮ ಪಹಣಿ ಪ್ರತಿ ಪಡೆಯಲು ದೂರದ ತಾಲ್ಲೂಕು ಕೇಂದ್ರಸ್ಥಾನಕ್ಕೆ ಪ್ರಯಾಣಿಸಬೇಕಾಗಿರುವುದು ನಿಜ. ಈ ಯೋಜನೆಯನ್ನು ವಿಕೇಂದ್ರೀಕರಣಗೊಳಿಸಿ ಖಾಸಗಿಯವರ ಭಾಗವಹಿಸುವಿಕೆಯಿಂದ ಹೋಬಳಿ ಮಟ್ಟಕ್ಕೆ ತರಲು ಸರ್ಕಾರ ಕ್ರಮಕೈಗೊಳ್ಳುತ್ತಿದೆ.

ಇ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ವರದಿಗಳು ಬಂದಿಲ್ಲ. ಆದಾಗ್ಯೂ ಬೆಳೆ ವಿಮಾ ಯೋಜನೆಗಾಗಿ ಗ್ರಾಮಲೆಕ್ಕಾಧಿಕಾರಿಗಳು ಪಹಣಿಯನ್ನು ಬರೆದಿರದಿದ್ದರೂ ವಿಮಾ ಯೋಜನೆಗಾಗಿ ಗ್ರಾಮಲೆಕ್ಕಾಧಿಕಾರಿಗಳು ರೈತರಿಗೆ ಬೆಳೆ ಪ್ರಮಾಣಪತ್ರ ನೀಡುವಂತೆ ಕಂದಾಯ ಇಲಾಖೆಯು ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿದೆ. ಸುತ್ತೋಲೆ ಸಂ. ಆರ್‌ಡಿ 63 ಇಎಲ್‌ಆರ್ 2000 ದಿನಾಂಕ 30.5.2000ರಲ್ಲಿ ಸರ್ಕಾರವು ಈ ಸೂಚನೆಗಳನ್ನು ಹೊರಡಿಸಿದೆ.

ಈ) ಗ್ರಾಮಲೆಕ್ಕಾಧಿಕಾರಿಗಳು ಬೆಳೆ ಮಾಹಿತಿಯನ್ನು ಶೀಘ್ರವಾಗಿ ನೀಡಲು ಅನುವಾಗುವುದಕ್ಕಾಗಿ 600 ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಕೈಸಲಕರಣೆಯನ್ನು ನೀಡಲಾಗಿದೆ. ಗ್ರಾಮಲೆಕ್ಕಾಧಿಕಾರಿಗಳಿಗೆ ಕಂಪ್ಯೂಟರುಗಳನ್ನು ನೀಡಲಾಗಿದ್ದು ಇದರಿಂದ ದಾಖಲೆಗಳ ಇಂದೀಕರಣ ಸುಲಭವಾಗಿ ರೈತರಿಗೆ ಇಂದೀಕರಣಗೊಂಡ ಪಹಣಿಗಳು ಬೇಗನೇ ಲಭ್ಯವಾಗುತ್ತವೆ.

ಬೆಳಗಾವಿ ಜಿಲ್ಲೆ ಲೋಕೋಪಯೋಗಿ ಇಲಾಖೆಗೆ ಸೇರಿದ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಮಾಡುವುದು

67 (205) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ 1. ಬೈಲಹೊಂಗಲ-ಬೆಳವಡಿ ವಯಾ ಅನಿಗೋಳ 2. ಬೈಲಹೊಂಗಲ-ಯಲ್ಲಮ್ಮನಗುಡ್ಡ ವಯಾ ಹೊಸೂರು 3. ಬೈಲಹೊಂಗಲ-ಗೋಕಾಕ ವಯಾ ಹರಲಿ ಕ್ರಾಸ್ ಈ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ?